ಯಾರಾದರೂ ನೋಡಿದರೆ ಆಕೆಗೆ ತಾವೇ ಏನೋ ಮಾಡಿದೆವು ಎಂದುಕೊಂಡಾರು ಎಂದು ಗಂಡ ಹೆಂಡಿರಿಬ್ಬರೂ ಹೆದರಿಕೊಳ್ಳುವಷ್ಟು.

'ಅಲ್ಲ ಅಜ್ಜೀ... ಹುಡುಕುವ. ನೀನು ಸ್ವಲ್ಪ ಸಮಾಧಾನ ಮಾಡಿಕೋ. ಎಲ್ಲ ಸೇರಿ ಪ್ರಯತ್ನ ಪಡುವ. ನಿನ್ನ ಚೀಲದಲ್ಲಿ ಇನ್ನೊಮ್ಮೆ ಹುಡುಕು. ಮಗನ ವಿಳಾಸ ಸಿಗಬಹುದು.'

'ಇಲ್ಲ ಇಲ್ಲ. ನನಗೆ ಸರಿಯಾಗಿ ನೆನಪಿದೆ. ಆ ರಿಕ್ಷಾದವನಿಗೇ ನೋಡಲು ಕೊಟ್ಟಿದ್ದೆ. ಅವ ಅದನ್ನು ತಿರುಗಿ ಕೊಡಲೇ ಇಲ್ಲ.'

'ಹೋಗಲಿ ಆ ರಿಕ್ಷಾ ಡ್ರೈವರನ ಹೆಸರೇನಾದರೂ ಕೇಳಿದ್ದೀಯಾ...'

'ಇಲ್ಲ...' ಇನ್ನೂ ಅಳುವನ್ನು ನಿಲ್ಲಿಸದ ಆಕೆ ಹೇಳಿದಳು.

ಕೇಳುವುದು ವ್ಯರ್ಥ ಎಂದು ತಿಳಿದೂ ಅವರಿಬ್ಬರೂ ಒಟ್ಟೊಟ್ಟಿಗೇ ಕೇಳಿದರು: 'ಆ ರಿಕ್ಷಾದ ನಂಬರೇನಾದರೂ ನೋಡಿಕೊಂಡಿದ್ದೆಯಾ?...'

'ಇಲ್ಲ' ಅಜ್ಜಿಯ ಅಳು ಹೆಚ್ಚಾಗುತ್ತಲೇ ಇತ್ತು.

'ಅಜ್ಜೀ, ಈಗ ಹೇಗೂ ನಮ್ಮ ಮನೆಗೆ ಬಂದಿದ್ದೀಯ. ಇಲ್ಲೇ ಇರು. ಒಂದೆರಡು ದಿನಗಳಲ್ಲಿಯೇ ನಿನ್ನ ಮಗನ ಮನೆಯನ್ನು ಹುಡುಕಿ ಕರೆದುಕೊಂಡು ಹೋಗುತ್ತೇವೆ.'

ಅಳುವನ್ನು ಮುಂದುವರಿಸಿದ ಅಜ್ಜಿ, 'ನನ್ನಿಂದಾಗಿ ನಿಮಗೆಲ್ಲ ಸುಮ್ಮನೇ ಕಷ್ಟ. ನಾನೇ ಇಲ್ಲಿಂದ ಹೋಗಿಬಿಡುತ್ತೇನೆ' ಎಂದು ಹೇಳುತ್ತ ಕೈಯ್ಯಲ್ಲಿದ್ದ ಖಾಲಿ ಕಾಫಿ ಲೋಟವನ್ನು ಅಲ್ಲಿಯೇ ಪಕ್ಕದಲ್ಲಿಟ್ಟು ತನ್ನ ಬ್ಯಾಗನ್ನು ಹಿಡಿದುಕೊಂಡು ಹೊರಡಲು ಅಣಿಯಾಯಿತು. ಹಾಗೆಯೇ ಶಾಂತಾರಾಮ ಇನ್ನೂ ಕೈಯ್ಯಲ್ಲಿ ಹಿಡಿದುಕೊಂಡು ಅದರಲ್ಲೇನಾದರೂ ಸುಳಿವು ಸಿಗಬಹುದೇನೋ ಎಂದು ಹುಡುಕುತ್ತಿದ್ದ ಕಾಗದದ ಕಟ್ಟಿಗಾಗಿ ಕೈ ಚಾಚಿತು. ಈಗಂತೂ ಗಂಡ ಹೆಂಡತಿ ಇಬ್ಬರೂ ಒಟ್ಟೊಟ್ಟಿಗೇ ಹೇಳಿದರು, 'ಅಲ್ಲ ಅಜ್ಜಿ, ಕೇಳಿ ತಿಳಿಯದ ಈ ಜಾಗದಲ್ಲಿ ವಿಳಾಸವೇ ಇಲ್ಲದೆ ಎಲ್ಲಿ ಅಂತ ಹುಡುಕುತ್ತೀಯ. ನಾವು ಆಗಲೇ ಹೇಳಿದೆವಲ್ಲ. ಇಲ್ಲಿಯೇ ಇರು. ಎರಡು ದಿನದೊಳಗೆ ನಿನ್ನ ಮಗನ ಮನೆಯನ್ನು ಹುಡುಕಿ ನಿನ್ನನ್ನು ಅಲ್ಲಿಗೇ ಬಿಟ್ಟು ಬರುತ್ತೇವೆ'.



ಹೊರಡಲೆಂದು ಎದ್ದು ನಿಂತ ಅಜ್ಜಿ ಇವರ ಧ್ವನಿಯಲ್ಲಿನ ಆಗ್ರಹ ಮನಸ್ಸಿಗೆ ತಟ್ಟಿ ಪುನಃ ಅಲ್ಲಿಯೇ ಕುಳಿತುಕೊಂಡಿತು.

'ಅಲ್ಲ ಅಜ್ಜಿ, ಎಲ್ಲಿಂದ ಬಂದದ್ದು ನೀನು. ಅಲ್ಲಿ ಯಾರ ಜೊತೆಯಲ್ಲಿದ್ದೆ ಇಷ್ಟು ದಿನ. ಅದು ಏನು ಸಡನ್ನಾಗಿ ಇಲ್ಲಿನ ಮಗನ ಮನೆಯನ್ನು ಹುಡುಕಿಕೊಂಡು ಬಂದೆ?'